**ನ್ಯಾಯಸಮ್ಮತ ಆಚರಣೆಗಳ ಸಂಹಿತೆ (FAIR PRACTICES CODE)**

**ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿಮಿಟೆಡ್‌ರವರ ಪರಿಷ್ಕೃತ ನ್ಯಾಯಸಮ್ಮತ ಸಂಹಿತೆಗಳ ಆಚರಣೆ (FPC)**

**(20.03.2019 ರವರೆಗೆ ಅಪ್ಡೇಟ್ ಮಾಡಲಾಗಿದೆ)**

ಸಂಹಿತೆ ಸಂ.

1. ಮಾಹಿತಿಯುಕ್ತ ನಿರ್ಧಾರಗಳನ್ನು ಕೈಗೊಳ್ಳಲು ಸಂಭಾವ್ಯ ಕ್ಲೈಯಂಟ್‌ಗಳನ್ನು ಸಶಕ್ತಗೊಳಿಸುವುದಕ್ಕಾಗಿ ಅವರಿಂದ ಇತರ ಫ್ಯಾಕ್ಟರಿಂಗ್ ಕಂಪನಿಗಳವುಗಳೊಂದಿಗೆ ಅರ್ಥಪೂರ್ಣ ಹೋಲಿಕೆಯೊಂದನ್ನು ಮಾಡಲು ಅನುವಾಗುವಂತೆ ಸಂಸ್ಕರಿಸುವಿಕೆಗಾಗಿ ಪಾವತಿಸತಕ್ಕ ಶುಲ್ಕಗಳು / ಆಕರಿಸುವಿಕೆಗಳು, ಈ ಅರ್ಜಿಯನ್ನು ಅಂಗೀಕರಿಸದಿರುವ ಸಂದರ್ಭದಲ್ಲಿ ಇಂಥ ಶುಲ್ಕಗಳ ಮರುಸಂದಾಯ ಮಾಡಬಹುದಾದ ಮೊತ್ತ, ಪೂರ್ವ-ಪಾವತಿ ಆಯ್ಕೆಗಳು, ಮುಂತಾದವುಗಳ ಬಗೆಗಿನ ಮಾಹಿತಿಯನ್ನು ಒಳಗೊಂಡಿರುವ ಫ್ಯಾಕ್ಟರಿಂಗ್ ಸೌಕರ್ಯಕ್ಕಾಗಿನ ಅರ್ಜಿ ನಮೂನೆಯನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಹೊಂದಿರುತ್ತಾರೆ. ಮುಂದುವರೆದು, ಕ್ಲೈಯಂಟ್‌ಗಳಿಂದ ಸಲ್ಲಿಸಬೇಕಿರುವ ದಾಖಲೆಗಳನ್ನು ಈ ಅರ್ಜಿಯಲ್ಲಿ ಒದಗಿಸಲಾಗಿದೆ.

2. ಫ್ಯಾಕ್ಟರಿಂಗ್ ಸೌಕರ್ಯಕ್ಕಾಗಿನ ಎಲ್ಲ ಅರ್ಜಿಗಳ ಸ್ವೀಕೃತಿಗೆ ಅಂಗೀಕಾರವನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ನೀಡುತ್ತಾರೆ.

3. ಸಂಪೂರ್ಣ ಮಾಹಿತಿ / ವಿವರಗಳು / ದಾಖಲೆಗಳನ್ನು ಒಳಗೊಂಡಿರುವ ರೂ.50.00 ಲಕ್ಷಗಳವರೆಗಿನ ಫ್ಯಾಕ್ಟರಿಂಗ್ ಸೌಕರ್ಯಕ್ಕಾಗಿನ ಅರ್ಜಿಗಳನ್ನು 7 ದಿನಗಳೊಳಗಾಗಿ; ರೂ.50.00 ಲಕ್ಷ ಮೇಲ್ಪಟ್ಟ ಮತ್ತು ರೂ.800.00 ಲಕ್ಷಗಳವರೆಗಿನ ಪ್ರಸ್ತಾಪಗಳನ್ನು 15 ದಿನಗಳೊಳಗಾಗಿ ಮತ್ತು ರೂ.800.00 ಲಕ್ಷಗಳಾಚೆಗಿನ ಪ್ರಸ್ತಾಪಗಳನ್ನು (ಬೋರ್ಡ್ ಕ್ರೆಡಿಟ್ ಕಮಿಟಿ) 45 ದಿನಗಳೊಳಗಾಗಿ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ವಿಲೇವಾರಿ ಮಾಡುತ್ತಾರೆ.

4. ಫ್ಯಾಕ್ಟರಿಂಗ್ ಸೌಕರ್ಯಕ್ಕಾಗಿನ ಅರ್ಜಿಗಳನ್ನು ಒಂದು ಸಮಂಜಸ ಕಾಲಾವಧಿಯೊಳಗೆ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಪರಿಶೀಲಿಸುತ್ತಾರೆ. ಹೆಚ್ಚುವರಿ ವಿವರಗಳು / ದಾಖಲೆಗಳು ಬೇಕಾದಲ್ಲಿ, ಅದರ ನಂತರದಲ್ಲಿ ಅರ್ಜಿದಾರರು / ಕ್ಲೈಯಂಟ್‌ಗಳಿಗೆ ತಕ್ಷಣ ತಿಳಿಸುತ್ತಾರೆ.

5. ಅರ್ಜಿದಾರರು / ಕ್ಲೈಯಂಟ್‌ಗಳಿಂದ ಸಲ್ಲಿಸಲ್ಪಡುವ ಫ್ಯಾಕ್ಟರಿಂಗ್ ಸೌಕರ್ಯಕ್ಕಾಗಿನ ಅರ್ಜಿಗಳು ಸಮರ್ಪಕವಾಗಿ ಮೌಲ್ಯಮಾಪನ ಮಾಡಲ್ಪಡುವುದನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಖಚಿತಪಡಿಸಿಕೊಳ್ಳುತ್ತಾರೆ.

6. ಯಾವುದೇ ಭದ್ರತೆ ಮತ್ತು ಲಾಭಾಂಶದ ಒಪ್ಪಂದವು ತಮ್ಮಿಂದ ಮಾಡಿಕೊಳ್ಳಲ್ಪಟ್ಟಿದ್ದರೂ, ಅರ್ಜಿದಾರರು / ಕ್ಲೈಯಂಟ್‌ಗಳ ಕ್ರೆಡಿಟ್‌ವರ್ದಿನೆಸ್ ಬಗ್ಗೆ ಸಮರ್ಪಕ ಸೂಕ್ತ ಕಾರ್ಯತತ್ಪರತೆಯನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ನಡೆಸುತ್ತಾರೆ.

7. ಮಂಜೂರು ಮಾಡಲಾಗುವ ಫ್ಯಾಕ್ಟರಿಂಗ್ ಮಿತಿಯು/ಗಳು ಕ್ಲೈಯಂಟ್‌ಗಳ ನೈಜ ಅಗತ್ಯತೆಗಳನ್ನು ಪೂರೈಸುತ್ತದೆ/ತ್ತವೆ ಎಂದು ಖಚಿತಪಡಿಸಿಕೊಳ್ಳುವುದಕ್ಕಾಗಿ ಇಂಥ ಕ್ಲೈಯಂಟ್‌ಗಳ ಫ್ಯಾಕ್ಟರಿಂಗ್ ಸೌಕರ್ಯದ ಅಗತ್ಯತೆಗಳನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಸೂಕ್ತವಾಗಿ ಮೌಲ್ಯಮಾಪನ ಮಾಡುತ್ತಾರೆ.

8. ಸಾಲಗಾರರು / ಕ್ಲೈಯಂಟ್‌ಗಳಿಗೆ ಮಂಜೂರು ಮಾಡಲಾಗುವ ಫ್ಯಾಕ್ಟರಿಂಗ್ ಮಿತಿಗಳನ್ನು ಅದರ ಷರತ್ತುಗಳು ಮತ್ತು ನಿಬಂಧನೆಗಳ ಜೊತೆಯಲ್ಲಿ ಆಡುಭಾಷೆಯಲ್ಲಿ ಅಥವಾ ಸಾಲಗಾರರು / ಕ್ಲೈಯಂಟ್‌ಗಳಿಂದ ಅರ್ಥ ಮಾಡಿಕೊಳ್ಳಲ್ಪಡುವ ಭಾಷೆಯೊಂದರಲ್ಲಿ ಸಂಬಂಧಿತ

ಅರ್ಜಿದಾರರು / ಕ್ಲೈಯಂಟ್‌ಗಳಿಗೆ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ತಿಳಿಸುತ್ತಾರೆ ಮತ್ತು ತಮ್ಮ ದಾಖಲೆಗಳಿಗಾಗಿ ಅದರ ಸ್ವೀಕೃತಿಗೆ ಅವರ ನಿರ್ದಿಷ್ಟ ಅಂಗೀಕಾರವನ್ನು ಪಡೆದುಕೊಳ್ಳುತ್ತಾರೆ. ಹೀಗೆ ತಿಳಿಸುವಾಗ, ಅದರಲ್ಲಿ ಉಲ್ಲೇಖಿಸಿರುವ ಎಲ್ಲ ಅಡಕಗಳ ಪ್ರತಿಗಳ ಜೊತೆಯಲ್ಲಿ ಫ್ಯಾಕ್ಟರಿಂಗ್ ಒಡಂಬಡಿಕೆಯ ಪ್ರತಿಯು ತಮಗೆ ಬೇಕಾಗುತ್ತದೆಯೇ ಎಂಬುದನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರಿಗೆ ಬರವಣಿಗೆಯಲ್ಲಿ ನಿರ್ದಿಷ್ಟವಾಗಿ ತಿಳಿಸುವಂತೆಯೂ ಸಹ ಅರ್ಜಿದಾರರು / ಕ್ಲೈಯಂಟ್‌ಗಳನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಅದರಲ್ಲಿ ಕೋರುತ್ತಾರೆ.

9. ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರ ಮಂಜೂರಾತಿ ಪ್ರಾಧಿಕಾರದಿಂದ ನಿರ್ದಿಷ್ಟಪಡಿಸಲಾಗುವ ಈ ಷರತ್ತುಗಳು ಮತ್ತು ನಿಬಂಧನೆಗಳು ಹಾಗೂ ಫ್ಯಾಕ್ಟರಿಂಗ್ ಸೌಕರ್ಯಗಳನ್ನು ಆಳುವ ಇತರ ಕೇವಿಯೆಟ್‌ಗಳನ್ನು ಅರ್ಜಿದಾರರು / ಕ್ಲೈಯಂಟ್‌ಗಳಿಗೆ ಬರವಣಿಗೆಯಲ್ಲಿ ತಿಳಿಸುವಾಗ, ಯಾರ ಆದೇಶಗಳ ಪ್ರಕಾರ ಆ ಮಂಜೂರಾತಿ ಸಂವಹನವನ್ನು ಬಿಡುಗಡೆ ಮಾಡಲಾಗಿದೆಯೋ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರ ಆ ಪ್ರಾಧಿಕಾರವನ್ನೂ ಸಹ ಅದರಲ್ಲಿ ಸೂಕ್ತವಾಗಿ ಸೂಚಿಸಲಾಗುತ್ತದೆ.

10. ಫ್ಯಾಕ್ಟರಿಂಗ್ ಒಡಂಬಡಿಕೆಯಲ್ಲಿ ಉಲ್ಲೇಖಿಸಿರುವ ಎಲ್ಲ ಅಡಕಗಳ ಪ್ರತಿಗಳ ಜೊತೆಯಲ್ಲಿ ಫ್ಯಾಕ್ಟರಿಂಗ್ ಒಡಂಬಡಿಕೆಯ ಒಂದು ಪ್ರತಿಯು ಮಂಜೂರಾತಿ / ಪೂರ್ವಪಾವತಿಯನ್ನು ಬಟವಾಡೆ ಮಾಡುವ ಸಮಯದಲ್ಲಿ ತಮ್ಮ ಎಲ್ಲ ಕ್ಲೈಯಂಟ್‌ಗಳಿಗೆ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರಿಂದ ತಪ್ಪದೇ ನೀಡಲ್ಪಡುತ್ತದೆ.

11. ಅರ್ಜಿದಾರರು / ಕ್ಲೈಯಂಟ್‌ಗಳು ಫ್ಯಾಕ್ಟರಿಂಗ್ ಸೌಕರ್ಯಗಳನ್ನು ಕೋರುತ್ತಿರುವ ಸಂದರ್ಭದಲ್ಲಿ, ಅವುಗಳ ತಿರಸ್ಕರಿಸುವಿಕೆಗೆ ದಾರಿ ಮಾಡಿಕೊಡುವ ಕಾರಣವೇನಾದರೂ(ಗಳೇನಾದರೂ) ಇದ್ದಲ್ಲಿ, ಅದನ್ನು(ಅವುಗಳನ್ನು), ಸಂಬಂಧಿತ ಫ್ಯಾಕ್ಟರಿಂಗ್ ಸೌಕರ್ಯಗಳಿಗಾಗಿನ ಅರ್ಜಿಗಳನ್ನು ಸ್ವೀಕರಿಸಿದುದಕ್ಕೆ ನೀಡಿದ ಅಂಗೀಕಾರದಲ್ಲಿ ಮುಂಚೆ ತಿಳಿಸಿದ್ದ ಸಮಯದೊಳಗಾಗಿ ಲಿಖಿತವಾಗಿ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ತಿಳಿಸುತ್ತಾರೆ.

12. ಮಂಜೂರು ಮಾಡಿದ ಮಿತಿಯಾಚೆಗೆ ಡ್ರಾ ಮಾಡುವಿಕೆಗಳನ್ನು ಅನುಮತಿಸುವುದು, ಪೂರ್ವಪಾವತಿ ಖಾತೆಯೊಂದನ್ನು ಒಂದು ನಾನ್-ಪರ್ಫಾರ್ಮಿಂಗ್ ಅಸೆಟ್ ಎಂಬುದಾಗಿ ವರ್ಗೀಕರಿಸಿದುದರ ಮೇರೆಗೆ ಅಥವಾ ಮಂಜೂರಾತಿಯ ಷರತ್ತುಗಳನ್ನು ಅನುಸರಣೆ ಮಾಡದಿರುವ ಮೇರೆಗೆ ಆ ಖಾತೆಯಿಂದ ಡ್ರಾ ಮಾಡುವಿಕೆಗಳನ್ನು ಅನುಮತಿಸದಿರುವುದು ಮುಂತಾದವುಗಳು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರ ಏಕಮಾತ್ರ ವಿವೇಚನೆಗೆ ಒಳಪಟ್ಟಿರುತ್ತವೆ. ಪುನಃ, ಇಂಥ ಕ್ಲೈಯಂಟ್‌ಗಳ ಫ್ಯಾಕ್ಟರಿಂಗ್ ಮಿತಿಗಳನ್ನು ಸಮರ್ಪಕವಾಗಿ ಪುನರಾವಲೋಕಿಸದೇ ವ್ಯವಹಾರದಲ್ಲಿ ವೃದ್ಧಿಯಾಗುವುದು ಮುಂತಾದವುಗಳ ಮೇರೆಗೆ ಕ್ಲೈಯಂಟ್‌ಗಳ ಹೆಚ್ಚುವರಿ ಅಗತ್ಯತೆಯನ್ನು(ಗಳನ್ನು) ಪೂರೈಸುವ ಬಾಧ್ಯತೆಯನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಹೊಂದಿರುವುದಿಲ್ಲ.

13. ಮಂಜೂರು ಮಾಡಿದ ಪೂರ್ವಪಾವತಿಯನ್ನು ಮಂಜೂರಾತಿಯ ಷರತ್ತುಗಳು ಮತ್ತು ನಿಬಂಧನೆಗಳ ಅನುಸರಣೆಯಲ್ಲಿ ಸಕಾಲಿಕವಾಗಿ ಬಟವಾಡೆ ಮಾಡುವುದನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಖಚಿತಪಡಿಸಿಕೊಳ್ಳುತ್ತಾರೆ.

14. ಮಾರುಕಟ್ಟೆ ಪರಿಸ್ಥಿತಿಗಳು / ನಿಧಿಗಳ ವೆಚ್ಚದ ಮೇಲೆ ಅವಲಂಬಿತವಾಗಿ ಕಾಲಕಾಲಕ್ಕೆ ಎಮ್‌ಆರ್‌ಒಡಿ (ರಿಯಾಯತಿಯ ಕನಿಷ್ಠ ದರ) ಮತ್ತು ಫ್ಯಾಕ್ಟರಿಂಗ್ ಶುಲ್ಕಗಳನ್ನು ನಿರ್ದೇಶಕ ಮಂಡಳಿಯು ನಿರ್ಧರಿಸುತ್ತದೆ. ಈ ಷರತ್ತುಗಳು ಮತ್ತು ನಿಬಂಧನೆಗಳಲ್ಲಿನ ಯಾವುದೇ ಬದಲಾವಣೆಯ ಸೂಚನೆಯನ್ನು ಸಂಬಂಧಿತ ಕ್ಲೈಯಂಟ್‌ಗಳಿಗೆ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ನೀಡುತ್ತಾರೆ. ರಿಯಾಯತಿ ದರಗಳು ಮತ್ತು ಫ್ಯಾಕ್ಟರಿಂಗ್ ಶುಲ್ಕಗಳು ಮುಂತಾದವುಗಳ ಸಂಬಂಧದಲ್ಲಿ, ರಿಯಾಯತಿ ದರಗಳು ಮತ್ತು ಫ್ಯಾಕ್ಟರಿಂಗ್ ಶುಲ್ಕಗಳಲ್ಲಿನ ಯಾವುದೇ ಬದಲಾವಣೆಯ ಸೂಚನೆಯನ್ನು ಆ ಸಾಲಗಾರರಿಗೆ ಆಡುಭಾಷೆಯಲ್ಲಿ ಅಥವಾ ಸಾಲಗಾರರು / ಕ್ಲೈಯಂಟ್‌ಗಳಿಂದ ಅರ್ಥ ಮಾಡಿಕೊಳ್ಳಲ್ಪಡುವ ಭಾಷೆಯೊಂದರಲ್ಲಿ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ನೀಡುತ್ತಾರೆ. ರಿಯಾಯತಿ ಶುಲ್ಕಗಳು ಮತ್ತು ಫ್ಯಾಕ್ಟರಿಂಗ್

ಶುಲ್ಕಗಳ ದರದಲ್ಲಿನ ಯಾವುದೇ ಬದಲಾವಣೆಗಳು ಭವಿಷ್ಯವರ್ತಿಯಾಗಿ ಮಾತ್ರ ಅನ್ವಯವಾಗುವುದನ್ನೂ ಸಹ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಖಚಿತಪಡಿಸಿಕೊಳ್ಳುತ್ತಾರೆ.

ಬಡ್ಡಿಯ ದರ ಮತ್ತು ಅಪಾಯಗಳ ವರ್ಗೀಕರಣದ ಕ್ರಮ ಮತ್ತು ಸಾಲಗಾರರ ಬೇರೆಬೇರೆ ವರ್ಗಗಳಿಗೆ ಬೇರೆಬೇರೆ ಬಡ್ಡಿ ದರವನ್ನು ಆಕರಿಸುವಿಕೆಯ ವೈಚಾರಿಕತೆಯನ್ನು ಸಾಲಗಾರರಿಗೆ ಬಹಿರಂಗಪಡಿಸಲಾಗುತ್ತದೆ ಅಥವಾ ಮಂಜೂರಾತಿ ಪತ್ರದಲ್ಲಿ ಸ್ಪಷ್ಟವಾಗಿ ಸಂವಹನ ಮಾಡಲಾಗುತ್ತದೆ.

ಬಡ್ಡಿಯ ದರಗಳು ಮತ್ತು ಅಪಾಯಗಳ ವರ್ಗೀಕರಣದ ಕ್ರಮಗಳನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರ ವೆಬ್-ಸೈಟ್‌ನಲ್ಲಿಯೂ ಸಹ ಲಭ್ಯವಾಗಿಸಲಾಗುತ್ತದೆ ಅಥವಾ ಸಂಬಂಧಿತ ಸಮಾಚಾರ ಪತ್ರಗಳಲ್ಲಿ ಪ್ರಕಟಿಸಲಾಗುತ್ತದೆ. ಬಡ್ಡಿಯ ದರಗಳಲ್ಲಿ ಬದಲಾವಣೆಯಾದಾಗಲೆಲ್ಲ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಅಥವಾ ಅನ್ಯಥಾ ಪ್ರಕಟಿಸಿದ ಈ ಮಾಹಿತಿಯು ಅಪ್ಡೇಟ್ ಮಾಡಲ್ಪಡುತ್ತದೆ.

15. ಒಡಂಬಡಿಕೆಯಡಿಯಲ್ಲಿ ಹಿಂದಕ್ಕೆ ಪಡೆಯುವ ಅಥವಾ ಹೆಚ್ಚುವರಿ ಭದ್ರತೆಗಳನ್ನು ಕೋರುವ ನಿರ್ಧಾರವೊಂದನ್ನು ಕೈಗೊಳ್ಳುವ ಮೊದಲು, ಫ್ಯಾಕ್ಟರಿಂಗ್ ಒಡಂಬಡಿಕೆಯಲ್ಲಿರುವುದರೊಂದಿಗೆ ಸಹಮತದಲ್ಲಿರುವ ಸಮಂಜಸ ಸೂಚನೆಯನ್ನು ಸಂಬಂಧಿತ ಕ್ಲೈಯಂಟ್‌ಗಳಿಗೆ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ನೀಡುತ್ತಾರೆ.

16. ಕ್ಲೈಯಂಟ್‌ಗಳ ವಿರುದ್ಧ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಹೊಂದಿರಬಹುದಾದ ಯಾವುದೇ ಕಾನೂನುಬದ್ಧ ಹಕ್ಕು ಅಥವಾ ಬೇರಾವುದೇ ದಾವೆಯ ಧಾರಣಾಧಿಕಾರಕ್ಕೆ ಒಳಪಟ್ಟು, ಫ್ಯಾಕ್ಟರಿಂಗ್ ಬಾಧ್ಯತೆಗಳ ಹಣಸಂದಾಯವನ್ನು ಸ್ವೀಕರಿಸಿದ ನಂತರ ಎಲ್ಲ ಭದ್ರತೆಗಳನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಬಿಡುಗಡೆ ಮಾಡುತ್ತಾರೆ. ಸೆಟ್ ಆಫ್‌ನ ಇಂಥ ಹಕ್ಕನ್ನು ಚಲಾಯಿಸಬೇಕಾದಲ್ಲಿ, ಉಳಿದಿರುವ ದಾವೆಗಳ ಬಗೆಗಿನ ಮತ್ತು ಸಂಬಂಧಿತ ದಾವೆಯು ಇತ್ಯರ್ಥಪಡಿಸಲ್ಪಡುವವರೆಗೆ / ಪಾವತಿಸಲ್ಪಡುವವರೆಗೆ ಯಾವವುಗಳಡಿ ಆ ಭದ್ರತೆಯನ್ನು ಉಳಿಸಿಕೊಳ್ಳಲು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಅರ್ಹರಾಗಿದ್ದಾರೋ ಆ ದಾಖಲೆಗಳ ಬಗೆಗಿನ ಸಂಪೂರ್ಣ ನಿರ್ದಿಷ್ಟತೆಗಳೊಂದಿಗೆ ಅದರ ಬಗ್ಗೆ ಸೂಚನೆಯನ್ನು ಕ್ಲೈಯಂಟ್‌ಗಳಿಗೆ ನೀಡಲಾಗುತ್ತದೆ.

17. ಸಂಬಂಧಿತ ಕ್ಲೈಯಂಟ್‌ಗಳಿಂದ ಮುಂಚೆ ಬಹಿರಂಗಪಡಿಸಿಲ್ಲದ ಹೊಸ ಮಾಹಿತಿಯು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರ ಗಮನಕ್ಕೆ ಬಂದಿರುವುದನ್ನು ಹೊರತುಪಡಿಸಿ, ಫ್ಯಾಕ್ಟರಿಂಗ್ ಸೌಕರ್ಯಗಳನ್ನು ತಾವು ಒದಗಿಸುವುದರಲ್ಲಿ ಪರೋಕ್ಷವಾಗಿಯಾಗಲಿ ಅಥವಾ ಅಪರೋಕ್ಷವಾಗಿಯಾಗಲಿ ಸಂಬಂಧಿಸಿಲ್ಲದ ತಮ್ಮ ಕ್ಲೈಯಂಟ್‌ಗಳ ವ್ಯವಹಾರಗಳಲ್ಲಿ, ಸಾಧಾರಣವಾಗಿ, ಹಸ್ತಕ್ಷೇಪ ಮಾಡದಿರಲು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಪ್ರಯತ್ನಿಸುತ್ತಾರೆ.

18. ಫ್ಯಾಕ್ಟರಿಂಗ್ ಸೌಕರ್ಯಗಳನ್ನು ಒದಗಿಸುವುದರಲ್ಲಿ ಲಿಂಗ, ಜಾತಿ ಮತ್ತು ಧರ್ಮದ ನೆಲೆಗಟ್ಟಿನ ಮೇಲೆ ಪಕ್ಷಪಾತವನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಮಾಡುವುದಿಲ್ಲ. ಆದಾಗ್ಯೂ, ಎಸ್‌ಎಮ್‌ಇ ವಿಭಾಗ ಮುಂತಾದವುಗಳಂಥವುಗಳಿಗೆ ಪ್ರೋತ್ಸಾಹನವನ್ನು ನೀಡಲು ರೂಪಿಸಲಾಗುವ ಯೋಜನೆಗಳಲ್ಲಿ ಪಾಲ್ಗೊಳ್ಳುವುದರಿಂದ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರನ್ನು ಇದು ತಡೆಯುವುದಿಲ್ಲ.

19. ಫ್ಯಾಕ್ಟರಿಂಗ್ ಸೌಕರ್ಯಗಳ ವಸೂಲಾತಿಯ ವಿಷಯದಲ್ಲಿ, ಸ್ನಾಯು ಬಲವನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಬಳಸಿಕೊಳ್ಳುವುದಿಲ್ಲ.

20. ಕ್ಲೈಯಂಟ್‌ಗಳಿಂದಾಗಲಿ ಅಥವಾ ಕ್ಲೈಯಂಟ್‌ಗಳ ಖಾತೆಗಳ ಸ್ವಾಧೀನಪಡಿಸಿಕೊಳ್ಳುವಿಕೆಯನ್ನು ಪ್ರಸ್ತಾಪಿಸುವ ಬ್ಯಾಂಕ್‌ಗಳು / ಆರ್ಥಿಕ ಸಂಸ್ಥೆಗಳು / ಎನ್‌ಬಿಎಫ್‌ಸಿಗಳಿಂದಾಗಲಿ ಇಂಥ ಕ್ಲೈಯಂಟ್‌ಗಳ ಖಾತೆಗಳ ವರ್ಗಾವಣೆಗಾಗಿ ಕೋರಿಕೆಯನ್ನು ಸ್ವೀಕರಿಸಿದ ಸಂದರ್ಭದಲ್ಲಿ, ಸಂಬಂಧಿತ ಶಾಖೆಯಿಂದ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರ ಸಮ್ಮತಿ ಅಥವಾ ಅನ್ಯಥಾ ಅನ್ನು ಸಂಬಂಧಿತ ಪ್ರಾಧಿಕಾರದಿಂದ ಇಂಥ

ಕೋರಿಕೆಗಳನ್ನು ಸ್ವೀಕರಿಸಿದ 7 ದಿನಗಳೊಳಗಾಗಿ ಕೈಗೆತ್ತಿಕೊಳ್ಳಲಾಗುತ್ತದೆ ಹಾಗೂ ಆ ಶಾಖೆಯಿಂದ ಸಂಬಂಧಿತ ಶಿಫಾರಸ್ಸುಗಳನ್ನು ಸ್ವೀಕರಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಅದರ ಮೇಲಿನ ನಿರ್ಧಾರವನ್ನು ಸಂವಹನ ಮಾಡುತ್ತಾರೆ.

21. ಸಾಲದಾತರಿಗೆ ನ್ಯಾಯಸಮ್ಮತ ಆಚರಣೆಗಳ ಸಂಹಿತೆಯ ಸಂಬಂಧದಲ್ಲಿ ಉದ್ಭವಿಸುವ ವಿವಾದಗಳೇನಾದರೂ ಇದ್ದಲ್ಲಿ, ಅವುಗಳನ್ನು ಪರಿಹರಿಸುವುದಕ್ಕಾಗಿ ಸಂಸ್ಥೆಯೊಳಗಡೆ ದೂರು ನಿವಾರಣಾ ಯಾಂತ್ರಿಕತೆಯೊಂದನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಹೊಂದಿರುತ್ತಾರೆ. ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರ ಅಧಿಕಾರಿಯೋರ್ವರ ನಿರ್ಧಾರದಿಂದಾಗಿ ಉದ್ಭವಿಸುವ, ವ್ಯವಸ್ಥಾಪಕ ನಿರ್ದೇಶಕರ ಮಂಜೂರಾತಿ ಅಧಿಕಾರಗಳವರೆಗಿನ ಮಿತಿಯಲ್ಲಿ ಬರುವಲ್ಲಿನ ಎಲ್ಲ ವಿವಾದಗಳು ಕನಿಷ್ಟಪಕ್ಷ ನೋಂದಾಯಿತ ಕಛೇರಿಯಲ್ಲಿನ ಮುಂದಿನ ಉನ್ನತ ಪ್ರಾಧಿಕಾರದಿಂದ ವಿಚಾರಣೆ ನಡೆಸಲ್ಪಟ್ಟು, ವಿಲೇವಾರಿ ಮಾಡಲ್ಪಡುತ್ತವೆ. ನಿರ್ದೇಶಕರ ಸಮಿತಿಯ ಮಂಜೂರಾತಿ ಅಧಿಕಾರಗಳ ಮಿತಿಯಲ್ಲಿ ಬರುವ ಪ್ರಸ್ತಾಪಗಳ ಸಂಬಂಧದಲ್ಲಿ ದೂರುಗಳೇನಾದರೂ ಇದ್ದಲ್ಲಿ, ಸದರಿ ನಿರ್ದೇಶಕರ ಸಮಿತಿಯಿಂದ ಮಾತ್ರವೇ ಅವುಗಳು ನಿವಾರಿಸಲ್ಪಡುತ್ತವೆ.

ದೂರುಗಳೇನಾದರೂ ಇದ್ದಲ್ಲಿ, ಸಂಸ್ಥೆಯ ಅನುಸರಣಾ ಅಧಿಕಾರಿಗಳಿಗೆ ಅಥವಾ ಇ-ಮೇಲ್ ಮೂಲಕ govindsolanki@canbankfactors.com ಗೆ ಅವುಗಳನ್ನು ಉದ್ದೇಶಿಸತಕ್ಕದ್ದು.

ಮುಂದುವರೆದು, 6 ತಿಂಗಳುಗಳಿಗೊಮ್ಮೆ ಅಂದರೆ ಅರ್ಧ ವಾರ್ಷಿಕ ಆಧಾರದಲ್ಲಿ ಮಂಡಳಿಯಿಂದ ದೂರುಗಳ ಕಾಲಕಾಲಿಕ ಅವಲೋಕನವನ್ನು ಮಾಡಲಾಗುತ್ತದೆ.

22. ಕ್ಲೈಯಂಟ್‌ಗಳು / ಸಾಲಗಾರರೊಂದಿಗೆ ಸೂಕ್ತ ರೀತಿಯಲ್ಲಿ ವ್ಯವಹರಿಸಲು ತಮ್ಮ ಸಿಬ್ಬಂದಿಗಳು ಸಾಕಷ್ಟು ತರಬೇತಿಗೊಳಪಡುವುದನ್ನು ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಖಚಿತಪಡಿಸಿಕೊಳ್ಳುತ್ತಾರೆ.

23. ಕಾರ್ಯಾಚರಣಾ ಹಂತದಲ್ಲಿ, ಕ್ಲೈಯಂಟ್‌ಗಳು / ಸಾಲಗಾರರ ಪ್ರಯೋಜನಕ್ಕಾಗಿ ಈ ಮುಂದಿನ ಮಾಹಿತಿಯನ್ನು ನಮ್ಮ ಶಾಖೆಗಳು / ವ್ಯವಹಾರದ ವಹಿವಾಟುಗಳು ನಡೆಯುವ ಸ್ಥಳಗಳಲ್ಲಿ ಕ್ಯಾನ್‌ಬ್ಯಾಂಕ್ ಫ್ಯಾಕ್ಟರ್ಸ್ ಲಿ.ರವರು ಸ್ಪಷ್ಟವಾಗಿ ಪ್ರದರ್ಶಿಸುತ್ತಾರೆ:

a) ಸಂಸ್ಥೆಯ ವಿರುದ್ಧದ ದೂರುಗಳ ಪರಿಹರಣೆಗಾಗಿ ಸಾರ್ವಜನಿಕರು ಸಂಪರ್ಕಿಸಬಹುದಾದ ದೂರು ನಿವಾರಣಾ ಅಧಿಕಾರಿಗಳ ಹೆಸರು ಮತ್ತು ಸಂಪರ್ಕ ವಿವರಗಳು (ದೂರವಾಣಿ / ಮೊಬೈಲ್ ಸಂಖ್ಯೆಗಳು ಹಾಗೂ ಇ-ಮೇಲ್ ವಿಳಾಸಗಳು).

b) ದೂರು / ವಿವಾದವು ಒಂದು ತಿಂಗಳ ಅವಧಿಯೊಳಗೆ ನಿವಾರಿಸಲ್ಪಡದಿದ್ದಲ್ಲಿ, ಈ ಎನ್‌ಬಿಎಫ್‌ಸಿಯ ನೋಂದಾಯಿತ ಕಛೇರಿಯು ಯಾವ ಅಧಿಕಾರವ್ಯಾಪ್ತಿಯಲ್ಲಿ ಬರುತ್ತದೆಯೋ ಆ ಆರ್‌ಬಿಐನ ಡಿಎನ್‌ಬಿಎಸ್‌ನ ಪ್ರಾದೇಶಿಕ ಕಛೇರಿಯ ಪ್ರಭಾರಿ-ಅಧಿಕಾರಿಗಳಿಗೆ (ಸಂಪೂರ್ಣ ಸಂಪರ್ಕ ವಿವರಗಳು) ಗ್ರಾಹಕರು ಮನವಿ ಸಲ್ಲಿಸಬಹುದು.